ಓ.ಎಸ್. ನಂ. 50 /12
ಪಿ ಡಬ್ಲ್ಯೂ-1

**ಸಾಕ್ಷಿಯನ್ನು ದಿನಾಂಕ 25-11-2025 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**

**ಮುಂದುವರಿದ ಪಾಟೀ ಸವಾಲು- ಪ್ರತಿವಾದಿ 1 ಮತ್ತು 2 ರವರ ಪರ ಶ್ರೀ ಡಿಜಿಟಿ ವಕೀಲರಿಂದಃ**

ನಿಪಿ-4 ರಿಂದ 25 ಶ್ರೀ ಗಂಗಾಧರೇಶ್ವರ ಗ್ರಾಮಾಂತರ ವಿಧ್ಯಾಭ್ಯಾಸದ ಸಂಸ್ಥೆಗೆ ಸಂಬಂಧಿಸಿದ ದಾಖಲೆಗಳು ಆಗಿರುತ್ತವೆ ಎಂದರೆ ಸರಿ. ದಿಃ 13.07.1976 ಕ್ಕಿಂತ ಮೊದಲು ದಾವಾ ಆಸ್ತಿಯಲ್ಲಿ ಒಂದು ತೆರೆದ ಬಾವಿ, ಪಂಪ್ ಹೌಸ್ ಮತ್ತು ಒಂದು ದನಗಳು ಕಟ್ಟು ಹಾಕುವ ಷೆಡ್ ಇತ್ತು ಎಂದರೆಸ ರಿ. ಶ್ರೀ ಗಂಗಾಧರೇಶ್ವರ ಗ್ರಾಮಾಂತರ ವಿಧ್ಯಾಭ್ಯಾಸದ ಸಂಸ್ಥೆಗೆ ಸೇರಿದ ಶಾಲೆ ಪ್ರಾರಂಭ ಆದಾಗ ತೋವಿನಕೆರೆ ಗ್ರಾಮದ ಪಣಗಾರ್ ಮುನಿರಂಗಪ್ಪರವರ ಕಟ್ಟಡದಲ್ಲಿ ನಡೆಯುತ್ತಿತ್ತು ಎಂದರೆ ಸರಿ. ಆಗ ನನ್ನ ತಾತ ಚಿಕ್ಕಣ್ಣಯ್ಯರವರು ದಾವಾ ಆಸ್ತಿಯಲ್ಲಿ ಇದ್ದ ದನಗಳು ಕಟ್ಟಿ ಹಾಕುವ ಶೆಡ್ಡನ್ನು ರಿಪೇರಿ ಮಾಡಿಸಿ ಅದರಲ್ಲಿ ಶಾಲೆ ನಡೆಸಲು ಬಾಡಿಗೆಗೆ ಕೊಟ್ಟಿರುತ್ತಾರೆ ಎಂದರೆ ಸರಿ. ನನ್ನ ತಾತ ಸದರಿ ಶೆಡ್ ನ ಬಾಡಿಗೆ ಹಣ ತಿಂಗಳಿಗೆ 250 ರೂ ಪಡೆಯುತ್ತಿದ್ದರು ಎಂದರೆ ಸರಿ. ಸದರಿ ಬಾಡಿಗೆಯನ್ನು ನನ್ನ ತಾತ ದಿಃ 13.07.1976 ಕ್ಕಿಂತ ಮೊದಲು ಪಡೆಯುತ್ತಿದ್ದರು ಎಂದರೆ ಸರಿ.

2. ದಿಃ 13.07.1976 ರಂದು ನನ್ನ ತಾತ 1 ನೇ ಪ್ರತಿವಾದಿ ಸಂಸ್ಥೆಗೆ ದಾನ ಪತ್ರ ಬರೆದುಕೊಟ್ಟ ನಂತರ ಸದರಿ ಸಂಸ್ಥೆಯಿಂದ ಯಾವುದೇ ಬಾಡಿಗೆ ಹಣವನ್ನು ಪಡೆದಿಲ್ಲ ಎಂದರೆ ಸರಿ. ನಿಪಿ-4 ರಲ್ಲಿ ಕಾಣಿಸಿರುವ ಅಬ್ದುಲ್ ರಹೀಂ ಎಂಬುವರು ಗುಮಾಸ್ತರಾಗಿ, ಡಿ ತಿಮ್ಮಯ್ಯ, ವೆಂಕಟೇಶ ಮೂರ್ತಿ, ಬುಡೇನ್ ಸಾಬ್ ಮತ್ತು ವೈ ಕಾಳಪ್ಪರವರು 1 ನೇ ಪ್ರತಿವಾದಿ ಸಂಸ್ಥೆಯಲ್ಲಿ ಡಿ ದರ್ಜೆ ನೌಕರರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನಿಪಿ-4 ರಿಂದ 24 ಸದರಿಯವರು 1 ನೇ ಪ್ರತಿವಾದಿ ಸಂಸ್ಥೆಯಿಂದ ವೇತನ ಪಡೆದಂತಹ ರಸೀದಿಗಳು ಆಗಿರುತ್ತವೆ ಎಂದರೆ ಸರಿಯಲ್ಲ. ನಿಪಿ- 4 ರಿಂದ 24 ಭೂಮಿಯನ್ನು ಬಾಡಿಗೆಗೆ ಕೊಟ್ಟಿರುವುದಕ್ಕೆ ಸಂಬಂಧಿದ್ದಾಗಿರುತ್ತದೆ. ಮೇಲೆ ಹೇಳಿದ ವ್ಯಕ್ತಿಗಳಿಗೆ ದಾವಾ ಆಸ್ತಿಯನ್ನು ಬಾಡಿಗೆಗೆ ನೀಡಿರುವುದಿಲ್ಲ. ನಿಪಿ-4 ರಿಂದ 25 ರ ಬಗ್ಗೆ ನಾನು ವಾದ ಪತ್ರದಲ್ಲಿ ತಿಳಿಸಿರುವುದಿಲ್ಲ. ಈ ದಾವೆಯನ್ನು ಸಲ್ಲಿಸಿದಾಗ 1 ನೇ ಪ್ರತಿವಾದಿಯ ಸಂಸ್ಥೆಗೆ ಅರ್ಜಿಯನ್ನು ನೀಡಿ ನಿಪಿ-4 ರಿಂದ 25 ನ್ನು ಪಡೆದಿರುತ್ತೇನೆ. ನಾನು 1 ನೇ ಪ್ರತಿವಾದಿಗೆ ಅರ್ಜಿ ನೀಡಿದ್ದೇನೆ ಎಂದು ತೋರಿಸಲು ದಾಖಲೆಯನ್ನು ಪಡೆದಿರುವುದಿಲ್ಲ. ನಿಪಿ-4 ರಿಂದ 25 ನ್ನು ಯಾವಾಗ ಪಡೆದಿರುತ್ತೇನೆಂದು ನಿಖರವಾಗಿ ನನ್ನಿಂದ ಹೇಳಲಾಗುವುದಿಲ್ಲ. ನಿಪಿ- 4 ರಿಂದ 25 ನ್ನು ಪ್ರಾಂಶುಪಾಲರಾದ ಶಿವಕುಮಾರ್ ರವರು ದೃಢೀಕರಿಸಿರುತ್ತಾರೆ. 1 ನೇ ಪ್ರತಿವಾದಿ ಸಂಸ್ಥೆ ಕಾಂಪೋಜಿಟ್ ಜೂನಿಯರ್ ಕಾಲೇಜ್ ಆಗಿದ್ದು ಪ್ರೌಢ ಶಾಲೆಗೆ ಮುಖ್ಯೋಪಾದ್ಯಾಯರು ಇಲ್ಲದೆ ಇರುವ

ಕಾರಣ ಕಾಲೇಜಿನ ಪ್ರಾಂಶುಪಾಲರಾದ ಶಿವಕುಮಾರ್ ರವರು ಪ್ರೌಢ ಶಾಲೆಯನ್ನು ನೋಡಿಕೊಳ್ಳುತ್ತಿದ್ದು ಅವರೇ ನಿಪಿ- 4 ರಿಂದ 25 ನ್ನು ದೃಢೀಕರಿಸಿರುತ್ತಾರೆ. ನಿಪಿ- 4 ರಿಂದ 25 ರಲ್ಲಿ ಸದರಿ ದಾಖಲೆಗಳನ್ನು ನೀಡಿದ ದಿನಾಂಕವನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ.

3. 1 ನೇ ಪ್ರತಿವಾದಿಯ ವಿದ್ಯಾ ಸಂಸ್ಥೆ ಶೂನ್ಯ ಹಾಜರಾತಿ ಎಂದು 2022-23 ನೇ ಸಾಲಿನಲ್ಲಿ ಮುಕ್ತಾಯಗೊಂಡಿರುತ್ತದೆ ಎಂದರೆ ಸರಿ. ಸದರಿ ಸಂಸ್ಥೆಯ ಸರ್ಕಾರಿ ಪ್ರೌಢ ಶಾಲೆ ಮುಕ್ತಾಯಆದ ನಂತರ ಆ ಶಾಲೆಯ ದಾಖಲಾತಿಗಳು ಬುಕ್ಕಪಟ್ಟಣ ಸರ್ಕಾರಿ ಶಾಲೆಗೆ ವರ್ಗಾವಣೆ ಆಗಿರುತ್ತವೆ. ಆ ರೀತಿ ದಾಖಲಾತಿಗಳನ್ನು ವರ್ಗಾವಣೆ ಮಾಡುವ ಸಮಯದಲ್ಲಿ ನಾನು ಅಲ್ಲಿ ಕೆಲಸ ಮಾಡುವ ಕೆಲಸಗಾರರಿಂದ ಅಕ್ರಮವಾಗಿ ಕಾನೂನು ಬಾಹಿರವಾಗಿ ನಿಪಿ-4 ರಿಂದ 25 ನ್ನು ಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರಾಂಶುಪಾಲರಾದ ಶಿವಕುಮಾರ್ ರವರು 2019 ನೇ ಸಾಲಿನಲ್ಲಿ ನಿವೃತ್ತರಾಗಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಾನು ನಿಪಿ-4 ರಿಂದ 25 ನ್ನು ಪಡೆದಾಗ ಅವರು 1 ನೇ ಪ್ರತಿವಾದಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು. ನಿಪಿ-4 ರಿಂದ 25 ಈ ದಾವೆಯನ್ನು ಸಲ್ಲಿಸುವಾಗಲೇ ಹಾಜರುಪಡಿಸಿರುತ್ತೇನೆ. ನಿಪಿ-4 ರಿಂದ 25 ಕ್ಕೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಕಾನೂನು ಬಾಹಿರವಾಗಿ ನಿಪಿ- 4 ರಿಂದ 25 ನ್ನು ನಾನು ಎತ್ತಿಕೊಂಡು ನಿವೃತ್ತರಾಗಿರುವ ಪ್ರಾಂಶುಪಾಲರ ಸಹಿಯನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

**ಸಿ.ಜೆ. ಮತ್ತು ಪ್ರ.ದ.ನ್ಯಾದಂ.**
**ಕೊರಟಗೆರೆ**

ಓ.ಎಸ್. ನಂ. 50 /12
ಪಿ ಡಬ್ಲ್ಯೂ-1

Plaintiff present, filed his affidavit in lieu of chief examination and examined as PW-1. Got marked EX p1 to 13.

Sri. HVS prays time.

Further chief of PW 1 by: 13-01-2026

Civil Judge and JMFC.
***Koratagere.***